ಹೋಲೋಗ್ರಾಫಿ ವಿಲೀನವನ್ನೊಳಗೊಂಡ ಕಾರ್ಯವಿಧಾನ ಘಟಕಗಳು ಅದ್ಭುತ ಚಮತ್ಕಾರಗಳನ್ನು ಪ್ರದರ್ಶಿಸಿದ್ದರೆ, ಅದರಲ್ಲಿನ ವಿಶೇಷ ಉಪಾಂಗಗಳ ಸಂಯೋಜನೆಯು ನೈಜವೆನ್ನುವಂಥ ಕೃತಕ ವ್ಯವಸ್ಥೆಯನ್ನು ಸಾಧ್ಯವಾಗಿಸಿತ್ತು. ನಡೆದುಕೊಂಡೋ ಇಲ್ಲವೇ ಅಲ್ಲಲ್ಲಿ ಕುಳಿತು ತಮ್ಮ ಮುಂದೆ ರಮಣೀಯ ದೃಶ್ಯಗಳು ತೆರೆದುಕೊಳ್ಳುತ್ತಾ ಹೋದಂತೆ, ನಿಜ ಪ್ರಪಂಚದ ಜೊತೆಗೆ ಹೋಲೋಗ್ರಾಮ್‌ನ ಸಂಯೋಗ ಪ್ರತಿ ದಶಲಕ್ಷ ಕ್ಷಣಗಳಲ್ಲಿ ಮಾಹಿತಿಯನ್ನು ರವಾನಿಸುತ್ತಿತ್ತು.

ವಿಶ್ವದ ಪ್ರಮುಖ ತಾಣಗಳಿಗೆ ಆ ಎರಡು ಗಂಟೆಗಳ ಪಯಣ, ಅವಿರತ್ ಹಾಗೂ ಹನ್ನಾಳನ್ನು ಪ್ರದರ್ಶನದ ಕೊನೆಯಲ್ಲಿ ಮತ್ತೂ ಹತ್ತಿರ ತರಿಸಿತ್ತು. ಪಯಣದ ನಡುವೆ ಎದುರಾಗುವ ಸಂಕಷ್ಟಗಳನ್ನು ತಾವೂ ಎದುರಿಸಿದಂತೆ ಭಾಸವಾಗಿತ್ತು. ಪ್ರದರ್ಶನ ಮುಗಿದ ಬಳಿಕವೂ ಆ ಮರೆಯಲಾಗದ ಅನುಭವ ಅವರಿಗೆ ಮತ್ತೆ ಮತ್ತೆ ಮೆಲುಕು ಹಾಕುವ ಅನುಭೂತಿಗೆ ಒಳಗಾಗಿಸಿತ್ತು. ನಂತರ ಸಮೀಪದ ಕೆಫೆಟೇರಿಯಾದಲ್ಲಿ ಒಂದಿಷ್ಟು ಕಾಲಹರಣ ಮಾಡಿ ಹೋದರಾಯಿತು ಎಂದು ಅಲ್ಲಿನ ಪ್ರತ್ಯೇಕ ಕೋಣೆಯೊಂದನ್ನು ಬುಕ್ ಮಾಡಿ ಆಸೀನರಾದರು. ಅವಿರತ್ ಹನ್ನಾಳನ್ನೇ ತದೇಕಚಿತ್ತದಿಂದ ನೋಡುತ್ತಾ ಮನಬಿಚ್ಚಿ ಮಾತನಾಡತೊಡಗಿದ್ದ. ಮಾತುಕತೆ ವೈಯಕ್ತಿಕ ನೆಲೆಯಲ್ಲೇ ಸಾಗಿದ್ದು ಹನ್ನಾ ಆ ಸಂವಾದದಲ್ಲಿ ಸೆರೆಯಾಗಿದ್ದಳು.

'ನನಗ್ಯಾಕೋ ಎಲ್ಲೂ ಪ್ರೈವೆಸಿ ಸಿಗದೇನೋ ಅನಿಸುತ್ತೆ' ಎಂದು ಸುತ್ತಲೂ ನಿರುಕಿಸಿ ನುಡಿದ.

'ಏಕೆ?'

'ಗೋಡೆಗಳಿಗೂ ಕಿವಿಗಳಿರುತ್ತವಲ್ಲವೇ? ನಾವು ಮಾತನಾಡುವುದನ್ನು ಕೇಳಿಸಿಕೊಂಡು ಪ್ರತಿಕ್ರಿಯೆ ವ್ಯಕ್ತಪಡಿಸುತ್ತವೇನೋ ಎಂದು ಭಾಸವಾಗುತ್ತಿದೆ.'

'ಹಾಗಾದರೆ ಆ ಚಿತ್ರ ನೋಡಿದ ಬಳಿಕದ ಹ್ಯಾಂಗೋವರ್‌ನಿಂದ ನೀವಿನ್ನೂ ಹೊರ ಬಂದಿಲ್ಲ!'

'ನಿಮಗೆ ಏನೂ ಅನುಭವವಾಗುತ್ತಿಲ್ಲವೇ?'

'ನಿಮ್ಮಷ್ಟಿಲ್ಲ ಅನಿಸುತ್ತೆ. ಈ ಪ್ರತ್ಯೇಕ ಪುಟ್ಟ ಕ್ಯಾಬಿನ್ ನಮ್ಮ ಪ್ರೈವೆಸಿಗೆ ಧಕ್ಕೆ ತರುವುದಿಲ್ಲ. ಹಾಗೊಂದು ವೇಳೆ ಇಲ್ಲೂ ಕಣ್ಗಾವಲು ಕ್ಯಾಮೆರಾಗಳನ್ನು ಅವಿತಿಟ್ಟಿದ್ದರೆ ಏನೂ ಮಾಡಲಿಕ್ಕಾಗದು.'

'ಓ... ಮರೆತೇ ಹೋಗಿದ್ದೆ' ಎಂದು ಅವನು ಕೂಡಲೇ ಎಚ್ಚೆತ್ತವನಂತೆ ಸುತ್ತಲೂ ಪರೀಕ್ಷಕ ನೋಟ ಬೀರಿದ್ದ.

ಖಾಸಗಿ ಕ್ಯಾಬಿನ್ ಎಂದು ನಮೂದಾಗಿರುವುದರಿಂದ 'ಅದಕ್ಕೆ ಆಸ್ಪದ ನೀಡಿರಲಾರರು' ಎಂದು ತನ್ನಷ್ಟಕ್ಕೆ ಸಮಾಧಾನಪಟ್ಟುಕೊಂಡಿದ್ದ.

'ಹಾಗೊಂದು ವೇಳೆ ಈ ಕ್ಯಾಬಿನ್ ಒಳಗಿರುವ ಆ ವಾಲ್ ಹ್ಯಾಂಗಿಂಗ್‌ನಲ್ಲಿ ಏನಾದರೂ ಇಟ್ಟಿದ್ದರೆ...' ಕೆಣಕಿದಳು.

'ಪ್ಲೀಸ್ ಹನ್ಸ್, ಭಯ ಹುಟ್ಟಿಸಬೇಡ.'

'ಅರೆ... ಅಷ್ಟೊಂದು ಗಂಭೀರ ಪ್ರಕರಣಗಳ ತನಿಖೆ ಮಾಡೋರು ನೀವು. ನಿಮಗೆ ಭಯವೇ!?'

'ರೇಗಿಸ್ತಿದ್ದೀರಾ ಹನ್ನಾ, ಇರಲಿ. ನೀವು ಆ ಚಿತ್ರ ನೋಡುವಾಗ ಭಯದಿಂದ ನನ್ನ ಕೈ ಹಿಡಿದೇ ಇದ್ದಿದ್ದನ್ನು ಮರೆತಿರೇನು?'

'ಹೌದೇನು...' ತನ್ನ ನೆನಪನ್ನು ಹಿಂದಕ್ಕೆ ಓಡಿಸಿದ್ದಳು. ಚಿತ್ರದಲ್ಲಿನ ಯುವತಿ ಹಲವಾರು ಬೆಟ್ಟ ಪ್ರದೇಶ ಇಳಿಜಾರುಗಳನ್ನು ದಾಟಿ ಸಾಗುವಾಗ ಆ ರೋಮಾಂಚನಗೊಳಿಸುವ ದೃಶ್ಯದ ಜೊತೆಗೆ ಆ ಯುವತಿಯು ಅತ್ಯಂತ ಸಮೀಪ ಬಂದಳೇನೋ ಎಂಬ ಗಾಬರಿಯಿಂದ ತನಗೆ ಅರಿವಿಲ್ಲದಂತೆ ಅವಿರತ್‌ನ ಕೈಯೊಂದಿಗೆ ತನ್ನ ಕೈ ಮಿಲಾಯಿಸಿದ್ದಂತೂ ನಿಜ.

'ಏನೋ... ನೆನಪಿಗೆ ಬರ್ತಿಲ್ಲ' ಎಂದು ದೃಷ್ಟಿ ಕೆಳಹಾಯಿಸಿದಾಗ ಅವಿರತ್ ಅವಳನ್ನು ಮತ್ತಷ್ಟು ಛೇಡಿಸುವ ಇರಾದೆಯಿಂದ ತನ್ನ ಮೆನು ಕಾರ್ಡ್‌ನಲ್ಲಿಯೇ ಮತ್ತೊಂದು ಸುತ್ತು ತಿನಿಸನ್ನು ಆರ್ಡರ್ ಮಾಡಿದ. ರೊಬೋ ಸರ್ವರ್ ಒದಗಿಸಿದ್ದ ತಿನಿಸನ್ನು ಮೆಲ್ಲುತ್ತಾ ಮಾತು ಮುಂದುವರೆಸಿದ.

'ಆ ಪರ್ವತದ ಮೇಲಿನ ಅನುಭವ ಎದೆ ಝಲ್ ಎನಿಸುವಂತ್ತಿತ್ತು. ಆದರೆ ನೀವು ಹಾಗೆ ಚೀರಬಾರದಿತ್ತು.' 'ಬೇರೆಯವರ ಸ್ಥಿತಿ ನನ್ನದಕ್ಕಿಂತ ಭಿನ್ನವಾಗಿತ್ತೇನು? ಬಂಗೀ ಜಂಪ್ ಮಾಡಿದೆನೇನೋ ಎಂಬಂತೆ ಮೇಲಿನಿಂದ ಕೆಳಗೆ ಇಳಿದಂತಹ ದೃಶ್ಯಗಳು ಎಂತಹವರನ್ನೂ ನಡುಗಿಸಿಬಿಡುತ್ತವೆ.'

'ಅದಕ್ಕೇ ಇರಬೇಕು, ಅಲ್ಲಿಗೆ ಬರುವವರಿಗೆ ಎರಡು ತಲೆಗಳಂತೆ ಬುಕಿಂಗ್ಸ್ ಮಾಡಿರುವುದು. ಪ್ರಾಯಶಃ ಇಬ್ಬರಿದ್ದರೆ ಧೈರ್ಯವಿರುತ್ತದೆ ಎಂದು ಇರಬೇಕು.'

'ಇರಬಹುದು.'

'ಇಲ್ಲಿಂದ ನೀವು ಸಂಚಾರ ಕೆಲಸಕ್ಕೆ ಹೋಗುವಿರೋ ಇಲ್ಲಾ ಮನೆಗೋ?'

'ನನಗೆ ಇವತ್ತು ಕರ್ತವ್ಯ ಇದ್ದರೂ ಡ್ಯೂಟಿ ಆಫ್ ತೆಗೆದುಕೊಳ್ತೀನಿ. ಆ ಚಿತ್ರದ ಗುಂಗಿನಿಂದ ಹೊರಬರಲು ಒಂದೆರಡು ದಿನ ಬೇಕಾಗಬಹುದು.'

'ನಾಳೆಯ ನಿಮ್ಮ ಕಾರ್ಯಕ್ರಮವೇನೆಂದು ಕೇಳಬಹುದೇ?'

'ನಾಳೆ... ನಗರದ ಹೊರವಲಯದ ಪ್ರವೇಶ ಹಾಗೂ ನಿರ್ಗಮನದ ಸಂಚಾರವನ್ನು ನಾನು ಮಾನಿಟರ್ ಮಾಡಬೇಕಿದೆ. ಹಾಗೆಯೇ ನನ್ನ 'ಎಕ್ಸ್' ರೊಬೋವನ್ನು ವರ್ಕ್ ಸ್ಟೇಷನ್‌ನಲ್ಲಿ ಬಿಟ್ಟು ಹಲವಾರು ದಿನಗಳೇ ಆದ್ದರಿಂದ ಕ್ಲಿನಿಕ್‌ಗೆ ಹೋಗಿ ಅದರ ಸ್ಥಿತಿಗತಿ ವಿಚಾರಿಸಿಕೊಂಡು ಬರಬೇಕೆಂದುಕೊಂಡಿದ್ದೀನಿ.'

'ಅಲ್ಲಿ ನನ್ನ ಫ್ರೆಂಡ್ ಶೈನಿ ಇದ್ದಾನೆ. ತಾಂತ್ರಿಕ ವಿಚಾರ ಹಾಗೂ ಸರಬರಾಜನ್ನು ಅವನೇ ನಿರ್ವಹಿಸೋದು. ಅವನನ್ನು ಕೇಳಿದರೆ ನಿಮ್ಮ ರೊಬೋ ಸ್ಥಿತಿಗತಿ ತಕ್ಷಣವೇ ಹೇಳಿಬಿಡುತ್ತಾನೆ.'

'ಅವಶ್ಯಕತೆ ಇಲ್ಲ ಅನಿಸುತ್ತೆ. ನನ್ನ ಎಂ.ಪಿ. ವಾಕಿಗೆ ಬುಕ್ಕಿಂಗ್ ದಿನಾಂಕದ ಒಂದು ವಾರ ಕಳೆದು ತಲುಪಿಸಲಾಗುತ್ತೆ ಎಂದು ಡೆಲಿವರಿ ದಿನಾಂಕದ ಸಂದೇಶ ಕಳುಹಿಸಿದ್ದಾರೆ. ಅಂದರೆ ಈಗ ರೆಡಿಯಾಗಿರಬೇಕು.'

'ನಿಮ್ಮಿಷ್ಟ' ಎಂದು ಅಷ್ಟಕ್ಕೇ ವಿಷಯ ಮೊಟಕುಗೊಳಿಸದೆ ಕೆಲ ನಿಮಿಷ ಕಳೆದು ಮುಂದುವರೆಸಿದ. 'ನನ್ನ ಕೆಲವು ಅಸಿಸ್ಟೆಂಟ್ ರೊಬೋಗಳನ್ನು ಆ ವರ್ಕ್ ಸ್ಟೇಷನ್‌ನಲ್ಲಿ ಚಿಕಿತ್ಸೆಗೆ ಬಿಟ್ಟಿದ್ದರಿಂದ ನನಗೂ ಅಲ್ಲಿ ಕೆಲಸವಿದೆ.'

ಅವಿರತ್ ತನ್ನ ಸಾಂಗತ್ಯವನ್ನು ಅಪೇಕ್ಷಿಸುತ್ತಿದ್ದಾನೆಂದು ಹನ್ನಾಳಿಗಾಗಲೇ ಮನವರಿಕೆಯಾಗಿತ್ತು. ಅದು ಅವಳಿಗೂ ಸಮ್ಮತವಾಗಿತ್ತು. ಎಷ್ಟಾದರೂ ತಾವಿಬ್ಬರೂ ಮರಳುಭೂಮಿಯಲ್ಲಿ ಒಂಟಿ ಜೀವನ ನಡೆಸುತ್ತಿಲ್ಲವಲ್ಲ. ಮನುಷ್ಯ ಸಹಜಭಾವ ಮಿಡಿತಕ್ಕೆ ತುಡಿಯುವವರು.

'ಹಾಗಾದರೆ ಇಬ್ಬರೂ ಅಲ್ಲಿಗೆ ಒಟ್ಟಿಗೆ ಹೋದರಾಯಿತು ಅವಿರತ್.'

'ನನ್ನನ್ನು ಅವಿ ಎಂದು ಕರೆಯಿರಿ.' ಈ ಸಲಿಗೆಗೆ ಅವಳೂ ಸ್ಪಂದಿಸಿದಳು.

'ನನ್ನನ್ನು ಹನಿ ಎಂದು ಕರೆಯುವುದಿಲ್ಲ ತಾನೇ?'

'ಹೌದಲ್ಲವೇ. ಮರೆತೇ ಹೋಗಿತ್ತು. ಹನ್ನಾಳಿಗಿಂತಲೂ ಹನಿ ಎಂದು ಕರೆಯುವುದು ಸುಲಭ. ಹಾಗೆ ಕರೆದರೆ ನಿಮಗೆ ಬೇಜಾರಿಲ್ಲಾ ತಾನೆ?'

ಹನ್ನಾ ಅದಕ್ಕೆ ಮುಖ ಕೆಂಪಾಗಿಸಿ ಎದ್ದವಳೇ 'ನನಗೆ ಟೈಮಾಯ್ತು. ನಾನು ಹೊರಡ್ತಿದ್ದೀನಿ. ಬಾಯ್' ಎಂದು ಕೈ ಬೀಸಿ ಹೊರಟೇಬಿಟ್ಟಿದ್ದಳು.

ಅವಿರತ್‌ಗೆ ತಾನು ಕೊಂಚ ದುಡುಕಿದೆನೇನೋ ಅನಿಸಿತ್ತು. ಹನ್ನಾ ಎದ್ದುಹೋದ ರೀತಿಗೆ ನಾಳೆ ತಮ್ಮಿಬ್ಬರ ಭೇಟಿ ವರ್ಕ್ ಸ್ಟೇಷನ್‌ನಲ್ಲಿ ಆಗುವುದಿಲ್ಲವೇನೋ ಎಂಬ ಅನುಮಾನ ಮೂಡತೊಡಗಿತ್ತು. ಚಿತ್ರವೀಕ್ಷಣೆ ತಮ್ಮಿಬ್ಬರನ್ನು ಹತ್ತಿರ ತರಿಸಿದ್ದು, ಆ ಅನುಭೂತಿಗೆ ತನ್ನ ಅವಸರದ ನಡೆಯಿಂದಾಗಿ ಭಂಗ ಬಂತೇನೋ ಎಂದು ಮಿಡುಕಿದ.

ಆದರೆ ಅವನ ಅನುಮಾನ ಸುಳ್ಳಾಗಿಸುವಂತೆ ಮರುದಿನ ಹನ್ನಾ ತನ್ನ ಕರ್ತವ್ಯ ಮುಗಿಸಿ ರೊಬೋ ಸ್ಟೇಷನ್‌ಗೆ ಧಾವಿಸಿದ್ದಳು. ಅವಿರತ್ ಬರುವುದು ಕೊಂಚ ತಡವಾಗಿತ್ತಾದ್ದರಿಂದ ರಿಸೆಪ್ಷನ್‌ನಲ್ಲಿಯೇ ಕೆಲಹೊತ್ತು ಅವಳು ಕಾಯುವಂತಾಗಿತ್ತು. ಈ ಕಾಯುವಿಕೆ ಅಸಹನೀಯವಾದರೂ ಸಹ್ಯವಾಗಿತ್ತು. ಅವಿರತ್ ಬರುವಿಕೆಯನ್ನು ಖಚಿತಪಡಿಸಿಕೊಳ್ಳಲು ಅವನಿಗೆ ವಾಯ್ಸ್ ಕರೆ ಮಾಡಬೇಕೆಂದುಕೊಂಡರೂ ಬಲವಂತವಾಗಿ ತನ್ನ ಮನೋವಾಂಛೆಯನ್ನು ತಡೆದುಕೊಂಡಳು.

ರಿಸೆಪ್ಷನ್ ಸಮೀಪದಲ್ಲೇ ವರ್ಕ್ ಸ್ಟೇಷನ್‌ನಲ್ಲಿ ಕೈಗೊಳ್ಳಲಾಗುವ ದುರಸ್ತಿ ಕಾರ್ಯಗಳ ವಿವರಣೆ ವೀಡಿಯೋ ವಾಲ್‌ನಲ್ಲಿ ಮೂಡಿ ಬರುತ್ತಿತ್ತು. ಈ 'ವರ್ಕ್ ಸ್ಟೇಷನ್' ರೊಬಾಟ್‌ಗಳನ್ನು ಸರಬರಾಜು ಮಾಡಿದ ಕಂಪನಿಗೆ ಸೇರಿದ್ದಾಗಿದ್ದು ಕಾಲಕಾಲಕ್ಕೆ ಅದರ ದುರಸ್ತಿ ಎದುರಾದಾಗ ಕೆಲಸ ಕೈಗೊಳ್ಳಲು ಇಲ್ಲಿ ವ್ಯವಸ್ಥೆ ಮಾಡಲಾಗಿತ್ತು. ರೊಬೋನ ವಾರಂಟಿ ಅವಧಿ ಸಹ ಮುಕ್ತಾಯಗೊಂಡಿದ್ದು, ದುರಸ್ತಿಗೆ ತಗಲುವ ವೆಚ್ಚವನ್ನು ಸರ್ಕಾರ ಭರಿಸಬೇಕಾಗಿತ್ತು. ಆದರೆ ಅವಿರತ್‌ನ ಕೆಲಸ ಕಾರ್ಯಗಳು ಹೊರಗುತ್ತಿಗೆಯದಾದ್ದರಿಂದ ಅವರ ಸಂಸ್ಥೆಯೇ ದುರಸ್ತಿ ವೆಚ್ಚ ಭರಿಸಬೇಕಿತ್ತು.

**ಸಶೇಷ**